SERVICE ABOVE SELF

2025-26

Rotary

विश्वमित्रः

# ವಿಶ್ವಮಿತ್ರ
# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –04 ದಿನಾಂಕ : 23–07–2025

## ದಿನಾಂಕ: 23.07.2025ರ ವಾರದ ಸಭೆ

**ದಿನಾಂಕ : 23.07.2025 ರಂದು ರೋಟರಿ ಕ್ಲಬ್ ಶಿವಮೊಗ್ಗದ ವಾರದ ಸಭೆಯಲ್ಲಿ ಡಾ. ವಾಣಿಕೋರಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ತಾಯಿ ಮತ್ತು ಮಗುವಿನ ಆರೋಗ್ಯ ಎಂಬ ವಿಚಾರವಾಗಿ ಮಾತನಾಡಿದರು. ಈ ಕಾರ್ಯಕ್ರಮವು ರೋಟರಿಯ ತಾಯಿ ಮತ್ತು ಮಗುವಿನ ಆರೋಗ್ಯ ಮಾಸಾಚರಣೆ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ವೇದಿಕೆಯಲ್ಲಿ ಮುಖ್ಯ ಅತಿಥಿಗಳೊಂದಿಗೆ ಅಧ್ಯಕ್ಷರಾದ ರೊ.ಆರ್.ಆನಂದ್‌ರವರು ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದರು.**




ರೊ. ಕಿಶೋರ್ ಶೀರನಾಳಿಯವರಿಂದ "ಹಾಡು ಕೋಗಿಲೆ ನಲಿದಾಡು ಕೋಗಿಲೆ ರಾಘವೇಂದ್ರ ರಾಘವೇಂದ್ರ ಎಂದು ಹಾಡು ಈಗಲೇ" ಗೀತೆಯು ಸುಶ್ರಾವ್ಯಗಾಯನದ ಮುಖಾಂತರ ಪ್ರಾರ್ಥನೆಯಾಯಿತು. ರೊ.ಎಸ್. ಜಿ ಗೋಪಾಲ್‌ರವರು ಸರ್ವರನ್ನು ಸ್ವಾಗತಿಸಿದರು. ರೊ. ಡಿ.ಎಲ್. ಮಂಜುನಾಥರವರು ರೋಟರಿ ನ್ಯೂಸ್‌ನಲ್ಲಿನ ಘಟನೆಯೊಂದನ್ನು ವಿವರಿಸಿದರು. ರೊ. ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ ಮೆಂಬರ್‌ಶಿಪ್ ಡೆವೆಲೆಪ್‌ಮೆಂಟ್ ಸೆಮಿನಾರ್ ಬಗ್ಗೆ ತಿಳಿಸಿದರು. ರೊ. ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ಹಾಗೂ ಹುಟ್ಟು ಹಬ್ಬದ ಶುಭಾಶಯ ಕೋರಿದರು. ರೊ.ಡಿ. ಎಲ್. ಮಂಜುನಾಥರವರು ವೇದಿಕೆಗೆ ಆಗಮಿಸಿ ಹುಟ್ಟು ಹಬ್ಬದ ಶುಭಾಶಯ ಸ್ವೀಕರಿಸಿದರು. ರೊ.ಸುನೀತಾ ಶ್ರೀಧರ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾದ ರೊ.ಡಾ.ವಾಣಿಕೋರಿಯುವರು ಮಾತನಾಡುತ್ತಾ ರೋಟರಿಯೊಂದಿಗೆ ತಾವು ಹೊಂದಿರುವ ಸ್ನೇಹಿತರುಗಳು ಮತ್ತು ಐ.ಎಂ.ಎ.ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳನ್ನು ನಡೆಸಿದ ಬಗ್ಗೆ ನೆನಪುಗಳನ್ನು ಮೆಲುಕು ಹಾಕಿಕೊಂಡರು. ಅದರಲ್ಲೂ ವೈದ್ಯರ ನಡಿಗೆ ಹಳ್ಳಿಯ ಕಡೆಗೆ ಕಾರ್ಯಕ್ರಮವಂತೂ ಅತ್ಯಂತ ಯಶಸ್ವಿಯಾಗಿದ್ದನ್ನು







ಹಂಚಿಕೊಂಡರು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರದೈಹಿಕ ಆರೋಗ್ಯ, ಸಾಮಾಜಿಕ ಹೊಣೆಗಾರಿಕೆ, ಹಣಕಾಸು ಇಟ್ಟುಕೊಂಡಲ್ಲಿ ಆರೋಗ್ಯವಾಗಿರಲು ಸಾಧ್ಯ. ಈಗ ಆರೋಗ್ಯದ ಪರಿಸ್ಥಿತಿ ಬಗ್ಗೆ ತಿಳುವಳಿಕೆ ಬಗ್ಗೆಖಂಡಿತಾ ಇದೆ. ನಾವು ಆರೋಗ್ಯದ ಬಗ್ಗೆಯೇ ಮಾತನಾಡಬೇಕು. ಈಗ ತಂತ್ರಜ್ಞಾನ ಬಹಳ ಮುಂದುವರೆದಿದೆ. ಎ.ಐ ನಿಂದ ಆರೋಗ್ಯದ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದರು.

ಇಂದಿನ ದಿನಮಾನದಲ್ಲಿ ತಾಯಂದಿರ ಆರೋಗ್ಯ ಗರ್ಭಿಣಿಯರ ಆರೈಕೆ ಬಹು ಮುಖ್ಯವಾಗಿದ್ದು. ಈಗ ಗರ್ಭಿಣಿಯಾಗಲೇ ಯುವತಿಯರು ಯೋಚಿಸುತ್ತಿರುವುದು ಬಹು ವಿಪರ್ಯಾಸದ ಸಂಗತಿಯಾಗಿದೆ. ಮದುವೆಯಾಗಲು ಮನಸ್ಸಿರುವುದಿಲ್ಲ. ಮಗುವನ್ನು ಪಡೆಯಲು

## ಈ ವಾರದ ಸಭೆ

**ದಿನಾಂಕ :30-07-2025 ಬುಧವಾರ** **ಸಂಜೆ 6:45**

**ಡಾಕ್ಟರ್ಸ್ ಡೇ ಮತ್ತು**
**ಚಾರ್ಟರ್ಡ್ ಅಕೌಂಟೆಂಟ್ಸ್ ಡೇ**

**ನಮ್ಮ ಕ್ಲಬ್‌ನ ಡಾಕ್ಟರ್ಸ್ ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್‌ಗಳಿಗೆ ಅಭಿನಂದನಾ ಕಾರ್ಯಕ್ರಮ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ













ಆರೋಗ್ಯವೂ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಗರ್ಭಿಣಿ ಎನ್ನುವ ಅಂಶವೇ ನಶಿಸಿ ಹೋಗಬಹುದು ಎಂದು ಹಲವು ತಜ್ಞರು ಅಭಿಪ್ರಾಯ ಪಟ್ಟಿರುವುದರ ಬಗ್ಗೆ ಉಲ್ಲೇಖಿಸಿದರು. ಮದುವೆಯಾದ 1 ವರ್ಷದ ನಂತರ ಗರ್ಭಧರಿಸುವ ಬಗ್ಗೆ ಉತ್ತರವೇಇರುವುದಿಲ್ಲ. ಕೆಲವು ಯುವತಿಯರಿಗೆ ಗರ್ಭಿಣಿಯಾಗುವ ಮೊದಲು ಹೇಗೆ ಆರೈಕೆ ಮಾಡಿಕೊಳ್ಳಬೇಕು ಎನ್ನುವುದೇ ಪ್ರಶ್ನಾರ್ಥಕವಾಗಿದೆ.

ಈ ಮಧ್ಯೆ ಅವರು ರೋಟರಿಯಿಂದ ತಮಗೊದಗಿದ ಅನೂಕೂಲದ ತಮ್ಮ ವೈಯ್ಯಕ್ತಿಕ ಘಟನೆಯೊಂದನ್ನು ಹಂಚಿಕೊಂಡರು. ಅವರು ಅಮೇರಿಕಾಕ್ಕೆ ಹೋಗಬೇಕಾದ ಸಂದರ್ಭದಲ್ಲಿ ವೀಸಾ ಪಡೆಯಲು ಬಹಳ ಕಷ್ಟವಾಗಿತ್ತು. ಆದರೆ ವೀಸಾ ನೀಡುವ ಅಧಿಕಾರಿಗಳು ರೋಟರಿ ಶಿವಮೊಗ್ಗದ ಹೆಸರು ಹೇಳಿದೊಡನೆ ಮರು ಮಾತನಾಡದೆ ವೀಸಾ ವಿತರಿಸಿದ್ದನ್ನು ಹಂಚಿಕೊಂಡರು.

ಈಗ ಬರುವ ದಂಪತಿಗಳು ಎಷ್ಟೇ ಆಧುನಿಕರಾದರೂ ನಾರ್ಮಲ್ ಡೆಲಿವರಿಯಾಗುತ್ತಾ ಎಂಬುದೇ ಅವರ ದೊಡ್ಡ ಪ್ರಶ್ನೆಯಾಗಿದೆ. ಈಗ ಗೂಗಲ್ ಮಾಹಿತಿ ಸಿಗುತ್ತಿರುವುದರಿಂದ ಅದನ್ನೆಲ್ಲಾ ಓದಿಕೊಂಡು ಬಂದು ಪ್ರಶ್ನೆಗಳನ್ನು ಕೇಳುತ್ತಾರೆ. ಪ್ರಯಾಣ ಮಾಡಬಹುದೇ? ಇಂಥಹ ಆಹಾರವನ್ನು ತಿನ್ನಬಹುದೇ ಎಂದು ಕುರಿತಾದ ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ. ಗರ್ಭಧರಿಸುವುದನ್ನು ಅವರು ಒಂದು ಕಾಯಿಲೆ ಎಂದು ಪರಿಗಣಿಸುತ್ತಾರೆ. ಇವುಗಳಿಗೆ ನಾವುಗಳು ಹೇಗೆ ಸ್ವಾಭಾವಿಕ ಪ್ರಕ್ರಿಯೆಯೊಂದಿಗೆ ಸಾಗಬಹುದು ಎನ್ನುವುದನ್ನು ವಿವರಿಸಿದರು. ನನ್ನನ್ನು ಕಾಣಲು ಬಂದ ಯುವತಿಯರು ಅದು ತಿನ್ನಬಹುದಾ? ಇದು ತಿನ್ನಬಹುದಾ ? ಎಂಬ ಪ್ರಶ್ನೆಗಳನ್ನೊಡ್ಡುತ್ತಾರೆ. ಕೆಲಸದ ಬಗ್ಗೆ, ಭಾರ ಹೊರುವುದರ ಬಗ್ಗೆ ಅವರ ಪ್ರಶ್ನೆ ಸಾಮಾನ್ಯವಾಗಿದ್ದು, ಈ ಕಾಲದಲ್ಲಿ ಯಾರು ಭಾರ ಹೊರುತ್ತಾರೆ ಎಂದರು. ನಾವು ಕೊಡುವ ಔಷಧಿಗಳಿಂದ ಮಾತ್ರ ಮಗು ಚೆನ್ನಾಗಿ ಬೆಳೆಯುತ್ತದೆ ಎಂದು ತಿಳಿಯಬಾರದು. ಗರ್ಭಿಣಿಯರ ಚಟುವಟಿಕೆಗಳೂ ಕೂಡ ಇದಕ್ಕೆ ಪೂರಕವಾಗಿರಬೇಕು ಎಂಬುದನ್ನು ತಿಳಿದು ಕಾರ್ಯ ನಿರ್ವಹಿಸಬೇಕು ಎಂದರು. ಕೆಲವರು ಗರ್ಭಿಣಿಯರಿದ್ದಾಗ ಪ್ರತೀ ತಿಂಗಳೂ ತಮ್ಮ ತೂಕ ಏರುತ್ತಿಲ್ಲವೆಂಬ ದೂರುತರುತ್ತಾರೆ. ಆದರೆ ಮಗು ದಿನೇ ದಿನೇ ಬೆಳೆಯುತ್ತದೆ. ನಾವುಗಳು ಮಗುವಿಗೆ ಕಾಯಿಲೆ ಇದ್ದಲ್ಲಿ ತಿಳಿಸಬಹುದು ಎಂದರು.

ನಾವುಗಳು ಎಂದಿಗೂ ನಮ್ಮ ಸಂಸ್ಕೃತಿಯನ್ನು ಮರೆಯಬಾರದು. ನಮ್ಮ ಸನಾತನ ಧರ್ಮ ಮರೆಯಬಾರದು ಎನ್ನುತ್ತಾ ನಾವುಗಳು ಸಹಜವಾಗಿ ಶಸ್ತ್ರಚಿಕಿತ್ಸೆ ಇಲ್ಲದ ಮಗುವಿನ ಜನನಕ್ಕೆ ಪ್ರಯತ್ನಗಳನ್ನು ಮಾಡುತ್ತೇವೆ. ಆದರೂ ಈ ಸಂದರ್ಭದಲ್ಲಿ ಗರ್ಭಿಣಿಯರನ್ನು ಸಮಜಾಯಿಷಿ ಮಾಡುವುದು ಕಷ್ಟವಾಗುತ್ತದೆ. ಗರ್ಭಿಣಿಯ ದೈಹಿಕ ಮತ್ತು ಮಾನಸಿಕ ಪರಿಸ್ಥಿತಿ ತಿಳಿದುಕೊಂಡು ನಾವು ಪರೀಕ್ಷೆ ಮಾಡಬೇಕಾಗಿದೆ. ನಾವುಗಳೂ ಕೂಡ ಹೆರಿಗೆ ಬಗ್ಗೆ ವಿಶ್ಲೇಷಣೆ ಮಾಡಬೇಕಾಗುತ್ತದೆ ಅಂದರೆ ನಾವು ಸಿಜೇರಿಯನ್ ಬಗ್ಗೆ ಪ್ರಚಾರ ಕೈಗೊಳ್ಳುತ್ತಿಲ್ಲವೆಂದು ಮನದಟ್ಟು ಮಾಡಿದರು.

ಗರ್ಭಿಣಿ ಸ್ತ್ರೀಯರಿಗೆ ಒಳ್ಳೆಯ ಆಹಾರಗಳನ್ನು ಕೊಡಿ. ಅಡುಗೆಮನೆ ಚೆನ್ನಾಗಿದ್ದರೆ ಆರೋಗ್ಯ ಚೆನ್ನಾಗಿರುತ್ತದೆ ಎಂದರ್ಥ ಎಂದು ತಿಳಿಸಿ, ಈ ಹಿಂದೆ ಹಬ್ಬ ಹರಿದಿನಗಳಲ್ಲಿ ವಿಶೇಷ ಅಡುಗೆ ಖಾದ್ಯವಿರುತ್ತಿತ್ತು. ಈಗ ಎಲ್ಲಾ ದಿನವೂ ಹಬ್ಬವೇ. ಆರ್ಡರ್ ಮಾಡಿದರೆ ಹೋಟೆಲ್‌ಗಳಿಂದ ಬರುತ್ತದೆ. ಇದು ಇಂದಿನ ಪರಿಸ್ಥಿತಿ ಎಂದರು. ನಮ್ಮ ದೇಹವನ್ನು ಸರಿಯಾಗಿ ಆರೋಗ್ಯವುಳ್ಳದ್ದಾಗಿ ನಿರ್ವಹಣೆ ಮಾಡಬೇಕು ಎಂದರು.

ಮಗು ಅಳಲೇಬಾರದು ಎಂಬುದಿರಬಾರದು. ಮಗು ಅತ್ತರೆ ಶ್ವಾಸಕೋಶ ಚೆನ್ನಾಗಿದೆ ಎಂದರ್ಥ ಮತ್ತು ಮಗು ಅತ್ತರೇ ಅದು ಭಾಷೆ ಬರುವುದಿಲ್ಲವಾದ್ದರಿಂದ ಅಳುವಿನ ಮೂಲಕ ತನಗೆ ಏನು ಬೇಕಾಗಿದೆ ಎನ್ನುವುದನ್ನು ತಿಳಿಸುತ್ತದೆ. ಬಾಣಂತಿಯರು ಎದೆ ಹಾಲಿನ ವಿಷಯದಲ್ಲೂ ತಿಳುವಳಿಕೆಯನ್ನು ಪಡೆಯಬೇಕು ಎಂದರು. ತಮ್ಮ ರೂಪ ಹಾಳಾಗುತ್ತದೆ ಎಂದು ಕೆಲ ಮಹಿಳೆಯರು ಹಾಲುಡಿಸುವುದಿಲ್ಲ. ಇದು ಅಕ್ಷಮ್ಯ. ತಾಯಿಯ ಹಾಲೇ ಶ್ರೇಷ್ಠವೆನಿಸಿದೆ ಎಂದರು.

ರೊ.ಹೆಚ್. ಚಂದ್ರಶೇಖರಪ್ಪ ನೋವು ರಹಿತ ಹೆರಿಗೆ ಬಗ್ಗೆ ಮತ್ತು ರೊ. ಪೇಟೆ ಅಜಯ ಕುಮಾರ್‌ರವರು ಗರ್ಭಿಣಿಯಾದ ಮಹಿಳೆಯರಿಗೆ ಬಿ.ಪಿ.ಶುಗರ್ ನಿರ್ವಹಣೆ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಮುಖ್ಯ ಅತಿಥಿಗಳು ಮಾತನಾಡುತ್ತಾ, ನಮ್ಮ ದೇಹ ಒಂದು ಅದ್ಭುತವಾದ ಯಂತ್ರ. ಪ್ರಕೃತಿಕೊಟ್ಟ ವರ. ಅದರ ಪೋಷಣೆ ಪಾಲನೆ ಸರಿಯಾಗಿ ನಿರ್ವಹಿಸಬೇಕು ಎಂದು ಮೇಲಿನ ಪ್ರಶ್ನೆಗಳಿಗೆ ಉತ್ತರಿಸಿ ತಮ್ಮ ಮಾತನ್ನು ಕೊನೆಗೊಳಿಸಿದರು.

ಅಧ್ಯಕ್ಷರಾದ ರೊ.ಆರ್.ಆನಂದ್‌ರವರು ಅಂದಿನ ಮುಖ್ಯ ಅತಿಥಿಗಳ ಮಾತನ್ನು ಉಲ್ಲೇಖಿಸಿ ಮಾತನಾಡಿ ಹೆರಿಗೆಯ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಅನುಭವಿಸುವ ನೋವಿನ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ರೊ.ಡಾ. ಉಷಾ ಪ್ರಭು ಮತ್ತು ರೊ.ಮಲ್ಲಿಕಾ ಜೋಯ್ಸ್‌ರವರು ಮುಖ್ಯ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿಗೌರವ ಸಮರ್ಪಣೆ ಮಾಡಿದರು. ಕೊನೆಯಲ್ಲಿ ರೊ.ಜಗದೀಶ್ ಕಾಮತ್‌ರವರು ಸರ್ವರನ್ನು ವಂದಿಸಿದರು.

## ವನಮಹೋತ್ಸವ ಕಾರ್ಯಕ್ರಮ






ದಿನಾಂಕ: 20–07–2025, ಭಾನುವಾರದಂದು ನಾರಾಯಣ ವನ, ಮಹಿಳಾ ಪಾಲಿಟೆಕ್ನಿಕ್ ಹಿಂಭಾಗ, ತುಂಗಾ ಮೇಲ್ದಂಡೆಯಲ್ಲಿ ವನಮಹೋತ್ಸವ ಗಿಡಗಳನ್ನು ನೆಡುವುದರ ಮೂಲಕ ಕಾರ್ಯಕ್ರಮವನ್ನು ನಡೆಸಲಾಯಿತು. ರೊ. ಪಿಡಿಜಿ. ಡಾ. ಪಿ. ನಾರಾಯಣ್, ಅಧ್ಯಕ್ಷರಾದ ರೊ. ಆರ್. ಆನಂದ್, ಕಾರ್ಯದರ್ಶಿ ರೊ. ವಿಶ್ವಾಸ್ ವೈ, ರೊ. ವೀರಣ್ಣ ಎ. ಹುಗ್ಗಿ, ರೊ. ಸೂರ್ಯನಾರಾಯಣ ಉಡುಪ, ರೊ. ಸುನೀತಾ ಶ್ರೀಧರ್, ರೊ. ಎನ್. ಎಸ್. ಶ್ರೀಧರ್, ರೊ. ಗೋಪಾಲಕೃಷ್ಣ ಗುಪ್ತ, ರೊ. ಎನ್. ಜಿ. ಉಷಾ, ರೊ. ಕಿಶೋರ್ ಶೀರ್ನಾಳಿ, ರೊ. ರಾಕೇಶ್ ಗೌಡ ಮುಂತಾದವರು ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

## ಸುದ್ದಿಯಲ್ಲಿ ಸದಸ್ಯರು



ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ. ಎನ್.ವಿ. ಭಟ್‌ರವರ ಮಗಳಾದ ಕು॥ ಪರಿಪೂರ್ಣ ಭಟ್ ಇವರು ರಾಜ್ಯ ಮಟ್ಟದ ಭರತನಾಟ್ಯ ಅಂತಿಮ ವಿದ್ವತ್ ಪರೀಕ್ಷೆಯಲ್ಲಿ ಶಿವಮೊಗ್ಗ ಕೇಂದ್ರಕ್ಕೆ 2ನೇ ರ್‍ಯಾಂಕ್‌ನೊಂದಿಗೆ ಶಿವಮೊಗ್ಗ ನಗರಕ್ಕೆ ಶೋಭೆ ತಂದಿರುತ್ತಾಳೆ. ಇವರು ವಿದುಷಿ ಸಿಂಧು ಕಿರಣ್‌ರವರಲ್ಲಿ 18 ವರ್ಷಗಳಿಂದ ಭರತನಾಟ್ಯ ಅಭ್ಯಾಸ ಮಾಡಿದ್ದು ಇದೀಗ ಕರ್ನಾಟಕ ಸಂಗೀತ ಅಂತಿಮ ವಿದ್ವತ್ ಪರೀಕ್ಷೆಗೆ ತಯಾರಿ ನಡೆಸಿದ್ದಾರೆ.

## FROM ROTARY NEWS - BY D.L. Manjunath
## METICULOUS PLANNING BEHIND A MAGICAL PROJECT – DG MahaveeraBothra
### – written by Rasheeda Bhagat in Rotary News


This was the First time in my Life that I did Tirupati Darshan without any Adhaar Card, PAN Card or a Security Check and experience was magical, says an excited MahaveerBothra, DG of RID 3233. He is talking about the special darshan he had organized for 1650 special children and their attenders soon after he took over as the newly carved district's governor.

I have always been passionate about doing some work with special children. Compared to the hardships they face on a daily basis, we live in heaven. So many of them cannot hear, speak or see. When I was the president of my club (RC Madras T. Nagar) in 2014-15, I had organised a one day camp for around 1,500 special children, and at that event all the children were given prizes," he adds.

His Tirupati project, which had such happy pictures of smiling children dressed in bright yellow shirts donning a Rotary Logo, had caught the attention of the local media in Tamil Nadu, with many publications and TV channels highlighting the story of how Rotary had organized special darshan at the Tirupati Tirumala Devasthanam for over 1000 special children from Chennai, who had been taken to Tirupati by a special train.

When Bothra recently dropped into the Rotary News Trust Office, I casually asked him how he got the idea and how easy or difficult it was to organize such an event for a whopping number of 1,000 children. The details he shared ..the meticulous planning that went into the event, literally left me gasping for air! Rarely do we realise the complete extent of the planning and hard work that goes into executing Rotary projects.

Oh, it was not easy at all, it was exciting alright but I was terrified thinking that while handing 1,000 children anything might happen. One of the children might fall or jump from the train, or get into an accident, and I might end up in prison. I couldn't sleep for four nights." (continued)





## ಸಂಪಾದಕೀಯ

## ಸಮಸ್ಯೆಯ ನಡುವೆ ಬದುಕುವ ಕಲೆ

ಒಂದು ಊರಿನಲ್ಲಿ ಜ್ಞಾನಿಯಾದ ವ್ಯಕ್ತಿಯೊಬ್ಬನಿದ್ದ. ಜನರು ಆತನ ಬಳಿ ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದರು. ಬದುಕಿನಲ್ಲಿ ಸಮಸ್ಯೆಗಳು ಇದ್ದೇ ಇರುತ್ತವೆ. ಆದರೆ ನಾವು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡರೆ ಕೆಲವಾದರೂ ಪರಿಹಾರವಾಗುತ್ತವೆ ಎಂದು ಅವನು ಅದೆಷ್ಟೇ ಹೇಳಿದರೂ ಜನರಿಗೆ ಅದು ಅರ್ಥವಾಗುತ್ತಿರಲಿಲ್ಲ. ಹಾಗಾಗಿ, ಅಂತಹವರಿಗೆ ಅರ್ಥವಾಗುವಂತೆ ಮನದಟ್ಟು ಮಾಡಬೇಕೆಂದು ಆತ ಕಾಯುತ್ತಿದ್ದ.

ಒಮ್ಮೆ ಒಂದು ದಿನ ಆತ ನದಿಯ ದಡದಲ್ಲಿ ದಿನವಿಡೀ ಕುಳಿತಿದ್ದ. ಬೆಳಗ್ಗೆಯಿಂದ ಸಂಜೆಯವರೆಗೂ ಆತ ಕುಳಿತ ಜಾಗ ಬಿಟ್ಟು ಕದಲದೇ ಇದ್ದುದನ್ನು ನೋಡಿ ಊರಿನ ಜನರು ಬಂದು ಯಾಕೆ ಹೀಗೆ ಕುಳಿತಿದ್ದೀರಿ ಎಂದು ಕೇಳುತ್ತಾರೆ. 'ಈ ನದಿ ಪೂರ್ತಿಯಾಗಿ ಒಣಗುತ್ತದೆಂದು ಕಾಯುತ್ತಾ ಕುಳಿತಿದ್ದೇನೆ. ಇದು ಒಣಗಿದ ಮೇಲೆ ನಾನು ಆಚೆ ದಡಕ್ಕೆ ನಡೆದುಕೊಂಡು ಹೋಗಬೇಕು' ಎಂದ ಆತ. ಅದಕ್ಕೆ ಊರ ಜನರು ನಕ್ಕು, 'ಹಾಗಾದರೆ ನೀವು ಎಂದಿಗೂ ಆಚೆ ದಡ ತಲುಪಲು ಸಾಧ್ಯವೇ ಇಲ್ಲ' ಎನ್ನುತ್ತಾರೆ. ಆಗ ಆ ವ್ಯಕ್ತಿ ಮುಗುಳ್ನಕ್ಕು ಹೇಳಿದ. 'ಇದನ್ನೇ ನಾನು ನಿಮಗೆ ಅದೆಷ್ಟೋ ವರ್ಷಗಳಿಂದ ಹೇಳಲು ಪ್ರಯತ್ನಿಸುತ್ತಿದ್ದೇನೆ. ಈ ನದಿ ನಮ್ಮ ಬದುಕಿನ ಸಮಸ್ಯೆಗಳ ಹಾಗೆ. ಅದು ಬತ್ತುವುದೇ ಇಲ್ಲ. ನದಿಯ ಆಚೆ ದಡಕ್ಕೆ ಹೋಗಲು ಈಜಿಕೊಂಡು ಹೋಗಬೇಕು ಅಥವಾ ದೋಣಿಯಲ್ಲಿ ಹೋಗಬೇಕು. ನದಿ ದಾಟಲು ದೋಣಿಯನ್ನು ಬಳಸುತ್ತೇವೆ. ದೋಣಿಯೇ ಇಲ್ಲವೆಂದರೆ ಈಜುವುದನ್ನು ಕಲಿಯುತ್ತೇವೆ. ಸೇತುವೆ ಕಟ್ಟಲು ಪ್ರಯತ್ನಿಸುತ್ತೇವೆ. ನದಿ ಬತ್ತುವುದಿಲ್ಲವೆಂದೋ, ದೋಣಿ ಇಲ್ಲವೆಂದೋ ಅಳುತ್ತಾ ಕುಳಿತುಕೊಂಡರೆ ಸಮಸ್ಯೆ ಪರಿಹಾರ ವಾಗುವುದಿಲ್ಲ. ಅದೇ ರೀತಿ ಬದುಕಿನಲ್ಲಿ ಸಮಸ್ಯೆಗಳಿಗೆ ಕೊನೆಯೇ ಇಲ್ಲ. ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತ ಅವುಗಳ ನಡುವೆಯೇ ಬದುಕುವುದನ್ನು ಕಲಿಯಬೇಕು. ಪಶ್ಚಾತ್ತಾಪ ಹೇಗೆ ಆಗಿಹೋದ ಸಂಗತಿಗಳನ್ನು ಬದಲಾಯಿಸದೋ ಹಾಗೆ ಚಿಂತೆ ಭವಿಷ್ಯವನ್ನು ಸುಧಾರಿಸದು. ಈಸಬೇಕು ಇದ್ದು ಜೈಸಬೇಕು' ಎಂದ.

ಇಂದು ಸಾಮಾಜಿಕ ಜಾಲತಾಣದಲ್ಲಿ ಸೆಲೆಬ್ರಿಟಿಗಳ ಆಡಂಬರದ ವಿವಾಹ, ವೈಭವದ ಜೀವನಶೈಲಿ ಇವುಗಳನ್ನು ನೋಡಿ ಯುವಜನರು ಹಣವಿದ್ದುಬಿಟ್ಟರೆ ಸಮಸ್ಯೆಗಳೇ ಬದುಕಲ್ಲಿ ಬರುವುದಿಲ್ಲ ಎಂದುಕೊಳ್ಳುತ್ತಾರೆ. ತಕ್ಷಣ ಹಣಮಾಡುವ ಹುಚ್ಚಿಗೆ ಬಿದ್ದು ಅಪರಾಧಗಳನ್ನು ಎಸಗುತ್ತಾರೆ. ಮತ್ತೆ ಕೆಲವರು ಸಮಸ್ಯೆಗಳಿರುವುದು ತಮ್ಮ ಬದುಕಿನಲ್ಲಿ ಮಾತ್ರ ಎಂದು ಯೋಚಿಸಿ ಖಿನ್ನತೆಗೆ ಜಾರುತ್ತಾರೆ. ಮತ್ತೆ ಕೆಲವರು ಜೀವನೋತ್ಸಾಹವಿಲ್ಲದೇ ನಿರುತ್ಸಾಹದಿಂದ ಬದುಕುತ್ತಿರುತ್ತಾರೆ. ಆದರೆ, ಇಂದು ನಾವು ಬದುಕಲು ಬೇಕಾದ ಅತ್ಯಂತ ಕನಿಷ್ಠ ಮಟ್ಟದ ಜ್ಞಾನ ಯಾವುದೆಂದರೆ ಸಮಸ್ಯೆಗಳಿಲ್ಲದೇ ಯಾರ ಜೀವನವೂ ಇಲ್ಲ ಎನ್ನವುದನ್ನು ಅರ್ಥಮಾಡಿಕೊಳ್ಳುವುದು. ಕೆಲವರ ಸಮಸ್ಯೆ ಹೊರಜಗತ್ತಿಗೆ ಕಾಣದಿರಬಹುದು. ಆದರೆ ಸವಾಲುಗಳಿಲ್ಲದ ಬದುಕು ಯಾರದ್ದೂ ಇಲ್ಲ.

ಕಡ್ಡಿಯನ್ನು ಗುಡ್ಡವಾಗಿಸಿಕೊಳ್ಳುವುದೋ, ಗುಡ್ಡವಿದ್ದರೂ ಕಡ್ಡಿ ಎಂದುಕೊಂಡು ಮುನ್ನಡೆಯುವುದೋ ಅದು ನಮ್ಮ ನಮ್ಮ ದೃಷ್ಟಿಕೋನದ ಮೇಲೆ ನಿರ್ಧಾರಿತ ಅಷ್ಟೇ ಅಲ್ಲವೇ...!?

• ರೊ. ಎಂ. ಮಾಧವಾಚಾರ್

*ಒಬ್ಬ ವ್ಯಕ್ತಿ ಸೋಲಿಸಲ್ಪಟ್ಟಾಗ,*
*ಅವನು ಮುಕ್ತಾಯವಾಗುವುದಿಲ್ಲ,*
*ಆದರೆ ಅವನು ಕೈಚೆಲ್ಲಿ ಕುಳಿತಾಗ ಮುಕ್ತಾಯವಾಗುತ್ತಾನೆ.*

## ವಾಸವಿ ಶಾಲೆಯಲ್ಲಿ ಇಂಟರ್ರ್ಯಾಕ್ಟ್ ಕ್ಲಬ್ ಉದ್ಘಾಟನೆ





ದಿನಾಂಕ: 18–07–2025ರಂದು ವಾಸವಿ ಶಾಲೆ, ಕೋಟೆರಸ್ತೆ, ಶಿವಮೊಗ್ಗ ಇಲ್ಲಿ ಇಂಟರ್ರ್ಯಾಕ್ಟ್ ಕ್ಲಬ್ ಉದ್ಘಾಟಿಸಲಾಯಿತು. ಅಧ್ಯಕ್ಷರಾದ ರೊ. ಆರ್. ಆನಂದ್, ರೊ. ವೀರಣ್ಣ ಎ. ಹುಗ್ಗಿ, ರೊ. ಸೂರ್ಯನಾರಾಯಣ ಉಡುಪ, ರೊ. ಎನ್.ಜಿ. ಉಷಾ, ರೊ. ಟಿ.ಆರ್. ಅಶ್ವತ್ಥನಾರಾಯಣ್ ಮತ್ತು ಶಾಲೆಯ ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.

## *Happy Birthday*



*Dr.Shivakumar (HPC)*
*19th July*



*Dr. Yatheesh*
*24th July*



*Sathish Kumar C.*
*28th July*

## Happy Wedding Anniversary

| | |
|---|---|
| *V. Sreenivasa & Nagarathna* | *5th July* |
| *Kishore Sheernaly & Anuradha* | *6th July* |
| *Ananda Kumar & Shantha A.* | *10th July* |
| *H.D.Udayashankar Sastry & Vasanth* | *14th July* |
| *Sumalatha Bhoopalam & Raghundan B.G.* | *14th July* |
| *Vijayakumar C. & Smt. Gouri V.* | *14th July* |

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495